ದಿನಾಂಕ 18-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಯ ಪರ ಶ್ರೀ ಎಫ್.ಬಿ.ಎಂ ವಕೀಲರಿಂದಃ**

1. ದಾವಾ ಆಸ್ತಿಯು ಪೂ-ಪ- 147 ಅಡಿಗಳು ಮತ್ತು ಉ-ದ- 45 ಅಡಿಗಳ ವಿಸ್ತೀರ್ಣ ಇದೆ. ದಾವಾ ಆಸ್ತಿಯ ಪೂ- ಪಂಚಾಯಿತಿ ರಸ್ತೆ ಇದೆ ಎಂದರೆ ಸರಿ. ಸದರಿ ಪೂರ್ವ ದಿಕ್ಕಿನ ಪಂಚಾಯಿತಿ ರಸ್ತೆಯನ್ನು ಸ ನಂಃ 90 ಎ/6 ರ ಜಮೀನಿನಲ್ಲಿಯೇ ಮಾಡಲಾಗಿದೆ ಎಂದರೆ ಸರಿ. ದಾವಾ ಆಸ್ತಿಯ ಪಶ್ಚಿಮಕ್ಕೆ - ಶ್ರೀಮತಿ ಶಿವಕ್ಕ ಕೋಂ ಶಾಂತಪ್ಪ ಚನ್ನಗೌಡ್ರ ಜಮೀನು ಮತ್ತು ಶೇಖಪ್ಪ ತಂದೆ ಶಿವಬಸನಗೌಡ ಹಂಚಿನ ಮನೆ ರವರ ಮನೆ ಇದೆ ಎಂದರೆ ಸರಿ. ದಾವಾ ಆಸ್ತಿಯ ದಕ್ಷಿಣಕ್ಕೆ- ಮೊದಲು ಪಕ್ಕೀರಪ್ಪ ತಂದೆ ಪಕ್ಕೀರಪ್ಪ ತಳವಾರ ರವರು ವಹಿವಾಟು ಮಾಡುತ್ತಿದ್ದು, ಪ್ರಸ್ತುತ ಖರೀದಿ ಆಧಾರದ ಮೇಲೆ ನಾಗಪ್ಪ ತಂದೆ ಹೊಂಡಂಡಪ್ಪ ಬಾಳಗೊಂಡರ ರವರು ಸ ನಂಃ 90 ಅ/6 ರ ಭಾಗದ ಜಮೀನನ್ನು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯ ಉತ್ತರಕ್ಕೆ- ಸ ನಂಃ 90 ಅ/6 ರ ಜಮೀನಿನ ಉಳಿಕೆ ಭಾಗವನ್ನು ರೇಣುಕಾ ಕೋಂ ವೀರಭದ್ರಗೌಡ ಪಾಟೀಲ ರವರು ಅಂದರೆ ವಾದಿರವರ ಆಸ್ತಿ ಇದೆ ಎಂದರೆ ಸರಿ.

2. ಮೊದಲಿನ ಸ ನಂಃ 90 ಎ/6 ರ ಜಮೀನು ಒಟ್ಟು ಕ್ಷೇತ್ರ 5 ಎಕರೆ 14 ಗುಂಟೆ ಇತ್ತು ಎಂದರೆ ಸರಿ. ದಾವಾ ಆಸ್ತಿಯು ಪೂ-ಪ-147 ಅಡಿಗಳು ಮತ್ತು ಉ-ದ- 45 ಅಡಿಗಳು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪೂ-ಪ- 150 ಅಡಿ ಮತ್ತು ಉ-ದ- 43.6 ಅಡಿಗಳು ಇದೆ ಎಂದರೆ ಸರಿಯಲ್ಲ. ಸದರಿ ಮೂಲ ಜಮೀನು ಮೂಲತಃ ಮಲ್ಲನಗೌಡ ಪಾಟೀಲರವರ ಮಾಲೀಕತ್ವ ಮತ್ತು ಸ್ವಾಧೀನಕ್ಕೆ ಒಳಪಟ್ಟ ಜಮೀನು ಎಂದರೆ ಸರಿ. ಸದರಿ ಮಲ್ಲನಗೌಡ ಪಾಟೀಲ ರವರು ಮರಣ ಹೊಂದಿದ್ದು, ಯಾವಾಗ ಮರಣ ಹೊಂದಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ಮಲ್ಲನಗೌಡ ಪಾಟೀಲ ರವರಿಗೆ ನಿಂಬವ್ವ ಎಂಬ ಹೆಂಡತಿ ಹಾಗೂ ವಾದಿ ಹಾಗೂ

ಅನ್ನಪೂರ್ಣ ಎಂಬ ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. 1999 ರ 10 ವರ್ಷದ ಪೂರ್ವದಲ್ಲಿಯೇ ಸದರಿ ಮಲ್ಲನಗೌಡ ಪಾಟೀಲ ರವರು ಮರಣ ಹೊಂದಿದ್ದರು. ಸದರಿ ಜಮೀನು ವಾರಸಾ ಪ್ರಕಾರ ಮಲ್ಲನಗೌಡ ಪಾಟೀಲ ಮರಣ ಹೊಂದಿದ ನಂತರ ಆತನ ಸದರಿ ಹೆಂಡತಿ ಮತ್ತು ಇಬ್ಬರು ಹೆಣ್ಣು ಮಕ್ಕಳಿಗೆ ಜಂಟಿ ಖಾತೆ ಆಗಿರುತ್ತದೆ ಎಂದರೆ ಸರಿ.

3. ವಾದಿಯು ಹುಟ್ಟಿನಿಂದ ಹಾಗೂ ಮದುವೆ ಆದ ನಂತರವೂ ತನ್ನ ಗಂಡ ಹಾಗೂ ಮಕ್ಕಳೊಂದಿಗೆ ಹೋತನಹಳ್ಳಿ ಗ್ರಾಮದಲ್ಲಿಯೇ ಖಾಯಂ ಆಗಿ ವಾಸವಾಗಿದ್ದಾರೆ ಎಂದರೆ ಸರಿ. ವಾದಿಯ ಹೆಸರಿನಲ್ಲಿ 9 ಎಕರೆ ಜಮೀನು ಇವೆ ಎಂದರೆ ಸರಿ. ಸದರಿ 9 ಎಕರೆ ಜಮೀನನ್ನು ವಾದಿಯು ಆಕೆಯ ಗಂಡ ಮತ್ತು ಮಕ್ಕಳೊಂದಿಗೆ ವಹಿವಾಟು ಮಾಡುತ್ತಿದ್ದಾಳೆ ಎಂದರೆ ಸಾಕ್ಷಿಯು ಸ ನಂಃ 90 ಎ/6 ರ ಜಮೀನನ್ನು ಅವರು ಪ್ಲಾಟಾಗಿ ಮಾರ್ಪಾಡಿಸಿ ಎಲ್ಲರಿಗೂ ಮಾರಾಟ ಮಾಡಿರುವುದರಿಂದ ಸದರಿ ಜಮೀನನ್ನು ಹೊರತುಪಡಿಸಿ ಆಕೆಯ ಇತರ ಉಳಿಕೆ ಜಮೀನುಗಳನ್ನು ವಹಿವಾಟು ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ವಾದಿಯ ಕುಟುಂಬಕ್ಕೆ ಸೇರಿದ ಟ್ರಾಕ್ಟರ್ ಇರತ್ತದೆ.

4. ಸ ನಂಃ 90 ಎ/6 ಒಟ್ಟು ಕ್ಷೇತ್ರ 5 ಎಕರೆ 18 ಗುಂಟೆಯನ್ನು ವಾದಿಯು ಕಾನೂನಿನ ಪ್ರಕಾರ ಬಿನ್ ಶೇತ್ಕಿಯಾಗಿ ಪರಿವರ್ತನೆ ಮಾಡಿರುವುದಿಲ್ಲ. ಸದರಿ ಒಟ್ಟು ಕ್ಷೇತ್ರದ ಪೈಕಿ 2 ಎಕರೆ 23 ಗುಂಟೆ 7 ಆಣೆ ಜಮೀನನ್ನು ಮಾತ್ರ ತುಂಡು ತುಂಡಾಗಿ ವಾದಿಯು ಹಲವಾರು ಜನರಿಗೆ ಮಾರಾಟ ಮಾಡಿರುತ್ತಾಳೆ ಎಂದರೆ ಸರಿ. ವಾದಿಯು ಅಂದಾಜಿನ ಮೇಲೆ ಸದರಿ ಜಮೀನನ್ನು ಪ್ಲಾಟುಗಳನ್ನಾಗಿ ಮಾಡಿ ರಸ್ತೆಗಳನ್ನು ಸಹ ಮಾಡಿದ್ದು, ಆದರೆ ನಿಖರವಾಗಿ ನೀಲಿ ನಕ್ಷೆಯನ್ನು ಪಡೆದುಕೊಂಡಿರುವುದಿಲ್ಲ. ದಾವಾ ಆಸ್ತಿಯಲ್ಲಿ ವಾಸದ ಹಂಚಿನ ಮನೆ, ಟ್ರಾಕ್ಟರನ್ನು ನಿಲ್ಲಿಸಲು ತಗಡಿನ ಶೆಡ್ಡು ಮತ್ತು ದನಕರುಗಳನ್ನು ಕಟ್ಟಲು ಹಂಚಿನ ಶೆಡ್ಡು ಇದ್ದು, ಅವುಗಳು ನಾನೇ ನಿರ್ಮಿಸಿದ ಮನೆ ಹಾಗೂ ಶೆಡ್ಡುಗಳಾಗಿರುತ್ತವೆ. ಸದರಿ ಹಂಚಿನ ಮನೆ ಮತ್ತು ತಗಡಿನ ಶೆಡ್ಡನ್ನು ನಾನು

ನಿರ್ಮಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಟ್ರಾಕ್ಟರ್ ನಿಲ್ಲಿಸಲು ನಿರ್ಮಿಸಿರುವ ತಗಡಿನ ಶೆಡ್ಡು ಅಗಲ 19 ಅಡಿ, ಉದ್ದ 12 ಅಡಿಗಳು ಇದೆ. ಸದರಿ ವಾಸದ ಹಂಚಿನ ಮನೆ ಪೂ-ಪ-35 ಅಡಿಗಳು ಮತ್ತು ಉ-ದ- 19 ಅಡಿಗಳ ವಿಸ್ತೀರ್ಣ ಇದೆ. ದನಕರುಗಳನ್ನು ಕಟ್ಟಲು ನಿರ್ಮಿಸಿರುವ ಹಂಚಿನ ಶೆಡ್ಡು ಪೂ-ಪ- 35 ಅಡಿಗಳು ಮತ್ತು ಉ-ದ- 10 ಅಡಿಗಳ ವಿಸ್ತೀರ್ಣ ಇದೆ. ದಾವಾ ಆಸ್ತಿಯಲ್ಲಿ ಹಿತ್ತಲು ಸಹ ಇದ್ದು ಅದರ ಅಳತೆ ಗೊತ್ತಿಲ್ಲ. ಸದರಿ ಅಳತೆಗಳೆಲ್ಲವನ್ನೂ ಸುಳ್ಳಿನಿಂದ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ದಾವಾ ಶೆಡ್ಯೂಲ್ ಆಸ್ತಿಯಲ್ಲಿ ಇರುವ ಮನೆಗಳನ್ನು ನಿರ್ಮಿಸಲು ನಾನು ಸಂಬಂಧಪಟ್ಟ ಪಂಚಾಯಿತಿಯಿಂದ ಪರವಾನಿಗೆ ತೆಗೆದುಕೊಂಡಿರುತ್ತೇನೆ. ಸದರಿ ಪರವಾನಿಗೆಯನ್ನು 1999 ರಲ್ಲಿಯೇ ಪಡೆದುಕೊಂಡಿರುತ್ತೇನೆ. ಪರವಾನಿಗೆಯನ್ನು ನೀಡಿದ ದಿನಾಂಕ ಮತ್ತು ತಿಂಗಳು ನನಗೆ ಗೊತ್ತಿರುವುದಿಲ್ಲ. ಸದರಿ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ಸ ನಂಃ 90 ಎ/6 ರ ಜಮೀನಿನ ಉಳಿಕೆ ಕ್ಷೇತ್ರದಲ್ಲಿ ವಾದಿಯು 2017 ರಲ್ಲಿ ವಾಸದ ಮನೆ, ಟ್ರಾಕ್ಟರನ್ನು ನಿಲ್ಲಿಸಲು ತಗಡಿನ ಶೆಡ್ಡು ಮತ್ತು ದನಕರುಗಳ ಶೆಡ್ಡನ್ನು ನಿರ್ಮಿಸಿಕೊಂಡಿರುತ್ತಾಳೆ ಎಂದರೆ ಸರಿ.

6. ನಾನು ಆಧರಿಸಿರುವ ಖರೀದಿ ಕರಾರು ಪತ್ರವನ್ನು ಮಲ್ಲಪ್ಪ ಬಾನಣ್ಣರವರು ಬರೆದಿರುತ್ತಾರೆ. ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟ ದಿನವೇ ಖರೀದಿ ಕರಾರಿನ ವ್ಯವಹಾರಗಳು ಒಂದೇ ದಿನ ಆಗಿತ್ತು. ಖರೀದಿ ಕರಾರಿನ ವ್ಯವಹಾರವು ವಾದಿಯ ತಾಯಿಯ ಮನೆಯಲ್ಲಿಯೇ ನಡೆದಿತ್ತು. ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟ 6 ತಿಂಗಳ ಒಳಗೆ ಖರೀದಿ ಪತ್ರವನ್ನು ನೋಂದಾಯಿಸಿಕೊಡಬೇಕೆಂದು ಮಾತುಕತೆಯು ಆಗಿತ್ತು. ಸದರಿ 6 ತಿಂಗಳ ಅವಧಿಯನ್ನು ಖರೀದಿ ಕರಾರು ಪತ್ರದಲ್ಲಿ

ನಮೂದಿಸಲಾಗಿತ್ತು. ಖರೀದಿ ಕರಾರು ಪತ್ರದ ಛಾಪಾ ಕಾಗದವನ್ನು ನಿಂಬವ್ವ ರವರೇ ತಂದಿರುತ್ತಾರೆ.

7. ಖರೀದಿ ವ್ಯವಹಾರವು ಮಧ್ಯಾಹ್ನ 12 ಗಂಟೆ ಸಮಯಕ್ಕೆ ಆಗಿರುತ್ತದೆ. ಖರೀದಿ ಕರಾರು ಪತ್ರವನ್ನು ಸದರಿ ವ್ಯವಹಾರದ ಸುಮಾರು 30 ಅಥವಾ 60 ನಿಮಿಷಗ ಅವಧಿಯಲ್ಲಿ ಬರೆಯಲಾಗಿರುತ್ತದೆ. ಖರೀದಿ ಕರಾರು ಪತ್ರದ ಸಂಗತಿಗಳನ್ನು ನಿಂಬವ್ವರವರೇ ಮಾಹಿತಿ ನೀಡಿ ಬರೆಸಿರುತ್ತಾರೆ. ನಿ.ಎಸ್-1 ರ ಖರೀದಿ ಕರಾರು ಪತ್ರದ ಮೊದಲನೇ ಪುಟದಲ್ಲಿ ಉತ್ತರಕ್ಕೆ-ಚನ್ನಪ್ಪ ಎಂದು ಬರೆದ ನಂತರ ಖಾಲಿ ಜಾಗವನ್ನು ಬಿಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿ.ಎಸ್-1 ರ ಖರೀದಿ ಕರಾರು ಪತ್ರವನ್ನು ಬರೆಯುವ ಸಮಯದಲ್ಲಿ ನಾನು ಜನರನ್ನು ಕರೆಯಲು ಹೋಗಿದ್ದೆ. ನಾನು ಜನರನ್ನು ಕರೆದುಕೊಂಡು ಬರುವುದರೊಳಗೆ ಸದರಿ ಕರಾರು ಪತ್ರವನ್ನು ಸಂಪೂರ್ಣವಾಗಿ ಬರೆದು ಇಟ್ಟಿದ್ದರು. ಸದರಿ ಖರೀದಿ ಕರಾರು ಪತ್ರದಲ್ಲಿ ಸಾಕ್ಷಿದಾರರಾದ ಮಲ್ಲಪ್ಪ ಶೆ ಎಂಬುವ ಹೆಸರಿನ ಸಹಿಯನ್ನು ದಪ್ಪ ಅಕ್ಷರದಲ್ಲಿ ತಿದ್ದಲಾಗಿದೆ ಎಂದರೆ ಸರಿಯಲ್ಲ. ಸದರಿ ಖರೀದಿ ಕರಾರು ಪತ್ರವನ್ನು ಬರೆದವರ ದಸ್ತೂರು ಸಹಿ ಇಲ್ಲ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ